# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 798 (944)

ಉತ್ತರಿಸಬೇಕಾದ ದಿನಾಂಕ : 11.03.2026

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಚುನಾಯಿತರಾದವರು)

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದಿಂದ ಮಾಸಿಕ ಪಿಂಚಣಿ ಪಡೆಯುತ್ತಿರುವ ವಿಧವೆಯರು ಮತ್ತು ಹಿರಿಯ ನಾಗರಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ವಿಧವೆಯರಿಗೆ ನೀಡಲಾಗುತ್ತಿರುವ ವಿಧವಾ ವೇತನ ಯೋಜನೆ ಮತ್ತು ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾಸುರಕ್ಷಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. |
| ಆ) | ಹಾಗೂ ಇವರಿಗೆ ಮಾಸಿಕ ಪಾವತಿಸುವ ಪಿಂಚಣಿ ಮೊತ್ತ ಎಷ್ಟು; | ವಿಧವಾ ವೇತನ ಹಾಗೂ ವೃದ್ಧಾಪ್ಯ ವೇತನ ಮತ್ತು ಸಂಧ್ಯಾಸುರಕ್ಷಾ ಪಿಂಚಣಿ ಯೋಜನೆಗಳಡಿ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತದ ವಿವರ ಈ ಕೆಳಗಿನಂತಿದೆ. |

| ಕ್ರ ಸಂ | ಯೋಜನೆ | ಮಾಸಿಕ ಪಿಂಚಣಿ ಮೊತ್ತ [ರೂ.ಗಳಲ್ಲಿ] |
|---|---|---|
| 1 | ವಿಧವಾ ವೇತನ | 800/- |
| 2 | ವೃದ್ಧಾಪ್ಯ ವೇತನ : | |
| | 60 ರಿಂದ 64 ವರ್ಷದೊಳಗಿನವರಿಗೆ | 600/- |
| | 65 ವರ್ಷ ಮೇಲ್ಪಟ್ಟವರಿಗೆ | 1,200/- |
| 3 | ಸಂಧ್ಯಾ ಸುರಕ್ಷಾ ವೇತನ | 1,200/- |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಕಳೆದ ಕೆಲವು ತಿಂಗಳುಗಳಿಂದ ವಿಧವೆಯರು ಮತ್ತು ಹಿರಿಯ ನಾಗರಿಕರಿಗೆ ಪಿಂಚಣಿ ಮೊತ್ತ ಪಾವತಿಸದೇ ತಡೆಹಿಡಿಯಲಾಗಿದೆ ಎಂಬ ಬಗ್ಗೆ ದೂರುಗಳಿವೆ; ಪಿಂಚಣಿ ತಡೆ ಹಿಡಿದಿರುವುದಕ್ಕೆ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ಸಾಮಾಜಿಕ ಭದ್ರತೆ ಪಿಂಚಣಿ ಯೋಜನೆಗಳಡಿ ವಿಧವೆಯರು ಮತ್ತು ಹಿರಿಯ ನಾಗರಿಕರಿಗೆ ಪಾವತಿಸಲಾಗುತ್ತಿರುವ ಯಾವುದೇ ಪಿಂಚಣಿಗಳನ್ನು ತಡೆಹಿಡಿಯಲಾಗಿರುವುದಿಲ್ಲ. ಆಧಾರ್ ಆಧಾರಿತ ಡಿಬಿಟಿ ಮೂಲಕ ಪಿಂಚಣಿಗಳನ್ನು ಪಾವತಿಸುತ್ತಿರುವುದರಿಂದ ಫಲಾನುಭವಿಗಳ ಬ್ಯಾಂಕ್ / ಅಂಚೆ ಖಾತೆಗೆ ಆಧಾರ್ ಹಾಗೂ ಎನ್‌ಪಿಸಿಐ ಸೀಡಿಂಗ್ ಆಗದೇ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಮಾತ್ರ ಪಿಂಚಣಿ ಪಾವತಿಯಾಗಿರುವುದಿಲ್ಲ. |

Scanned with OKEN Scanner

| | | |
|---|---|---|
| ಈ) | ನಿಯಮಿತವಾಗಿ ಪಿಂಚಣಿಯನ್ನು ಪಾವತಿಸಲು ತೆಗೆದುಕೊಂಡಿರುವ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/24/ಕೆಎಟಿ/ ಎಸ್‌ಎಸ್‌ಪಿ/2023, ದಿನಾಂಕ: 30.12.2023ರ ಆದೇಶದಂತೆ ಸಾಮಾಜಿಕ ಭದ್ರತೆ ಪಿಂಚಣಿ ಯೋಜನೆಗಳನ್ನು ಆಧಾರ್ ಆಧಾರಿತ ಡಿಬಿಟಿ ವ್ಯಾಪ್ತಿಗೆ ತರಲಾಗಿರುವುದರಿಂದ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಿಯಮಿತವಾಗಿ ಪಿಂಚಣಿಯನ್ನು ಪಾವತಿಸಲಾಗುತ್ತಿದೆ. |
| ಉ) | ವಿಧವೆಯರು ಮತ್ತು ಹಿರಿಯ ನಾಗರಿಕರ ಪಿಂಚಣಿ ಸೌಲಭ್ಯ ಪಡೆಯುತ್ತಿರುವವರಲ್ಲಿ ಅನರ್ಹರೂ ಇದ್ದು, ಇಂತಹ ಸಂಶಯಾತ್ಮಕ ಪ್ರಕರಣಗಳಲ್ಲಿ ಸರ್ಕಾರದ ಕ್ರಮವೇನು; ರಾಜ್ಯದಲ್ಲಿ ಈ ಸಂಖ್ಯೆ ಎಷ್ಟಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ವಿಧವೆಯರು ಮತ್ತು ಹಿರಿಯ ನಾಗರಿಕರ ಪಿಂಚಣಿ ಸೌಲಭ್ಯ ಪಡೆಯುತ್ತಿರುವವರಲ್ಲಿ ಅನರ್ಹ ಪಿಂಚಣಿದಾರರನ್ನು ಗುರುತಿಸಲು ಸಂಯೋಜನೆ ಮೊಬೈಲ್ ಆಪ್ ಅನ್ನು ಸಿದ್ಧಪಡಿಸಲಾಗುತ್ತಿದ್ದು, ಸದರಿ ಆಪ್ ಮೂಲಕ ಅನರ್ಹ ಮತ್ತು ಸಂಶಯಾತ್ಮಕ ಪಿಂಚಣಿದಾರರನ್ನು ಗುರುತಿಸಿ, ಅನರ್ಹರು ಎಂದು ಕಂಡುಬಂದಲ್ಲಿ ಅವರುಗಳಿಗೆ ಸಂದಾಯವಾಗುತ್ತಿರುವ ಪಿಂಚಣಿಗಳನ್ನು ನಿಯಮಾನುಸಾರ ಸ್ಥಗಿತಗೊಳಿಸಲು ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ:ಆರ್‌ಡಿ 45 ಕೆಎಟಿ ಎಸ್‌ಎಸ್‌ಪಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

Scanned with OKEN Scanner

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 798(944) ಕ್ಕೆ ಅನುಬಂಧ

| Sl No | District Name | DWP | OAP | SSY |
|---|---|---|---|---|
| 1 | Bagalkot | 70708 | 32284 | 79327 |
| 2 | Ballari | 49877 | 48921 | 32162 |
| 3 | Bangalore Rural | 33531 | 50646 | 40287 |
| 4 | Belagavi | 148589 | 117697 | 358343 |
| 5 | Bengaluru | 145730 | 119595 | 166653 |
| 6 | Bengaluru South | 45557 | 78151 | 76306 |
| 7 | Bidar | 50990 | 69245 | 109940 |
| 8 | Chamarajanagar | 43160 | 110922 | 30972 |
| 9 | Chikballapur | 41623 | 60971 | 88184 |
| 10 | Chikkamagaluru | 36407 | 46554 | 78654 |
| 11 | Chitradurga | 54493 | 46700 | 108787 |
| 12 | Dakshina Kannada | 48161 | 46471 | 59620 |
| 13 | Davanagere | 56255 | 79998 | 91371 |
| 14 | Dharwad | 56852 | 66018 | 64995 |
| 15 | Gadag | 39994 | 50089 | 28227 |
| 16 | Hassan | 67991 | 153709 | 88554 |
| 17 | Haveri | 60648 | 42329 | 105746 |
| 18 | Kalaburagi | 66159 | 61276 | 126795 |
| 19 | Kodagu | 15250 | 19225 | 19639 |
| 20 | Kolar | 50291 | 68616 | 85243 |
| 21 | Koppal | 49294 | 41500 | 77007 |
| 22 | Mandya | 87267 | 146893 | 90085 |
| 23 | Mysuru | 110569 | 93726 | 157444 |
| 24 | Raichur | 63894 | 89567 | 109117 |
| 25 | Shivamogga | 51908 | 46466 | 72529 |
| 26 | Tumakuru | 95714 | 114971 | 204718 |
| 27 | Udupi | 34137 | 38026 | 60947 |
| 28 | Uttara Kannada | 38990 | 49567 | 53959 |
| 29 | Vijayanagar | 50499 | 49956 | 50252 |
| 30 | Vijayapura | 65715 | 79417 | 143709 |
| 31 | Yadgir | 36617 | 33224 | 90660 |
| | **Total** | **1866870** | **2152730** | **2950232** |

G.N. Susheela

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಕೆ.ಎ.ಟಿ. & ಬಾ.ನಿ)
ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು – 560 001